ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ

**C/o , ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು-01.**

**ಸಂಖ್ಯೆ:ಸಮರಯೋ/ಜೆಸಿಎಲ್/ರಿ.ಪಿ.4/2020/2020-21** **ದಿನಾಂಕ:27.07.2020**

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
ಎಲ್ಲಾ ಜಿಲ್ಲೆಗಳು.

ಮಾನ್ಯರೇ,

ವಿಷಯ: ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ 2015ರ ಅಡಿ ನೋಂದಾಯಿಸಲ್ಪಟ್ಟ ಎಲ್ಲಾ ಸರ್ಕಾರಿ, ಸರ್ಕಾರದ ಅನುದಾನಿತ ಮತ್ತು ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಹೊರಗಿನಿಂದ ಬಂದುಹೋಗುವ ಸಿಬ್ಬಂದಿಯವರು ಸಂಸ್ಥೆಯ ಒಳಗೆ ಪ್ರವೇಶಿಸುವುದನ್ನು ನಿಯಂತ್ರಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂ.(ಸಿವಿಲ್) 4/2020 ಆದೇಶ ದಿನಾಂಕ:15.07.2020

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೇಂದ್ರ ಕಛೇರಿಯಿಂದ ಈಗಾಗಲೇ ಹಲವಾರು ಪತ್ರಗಳಲ್ಲಿ, ಸುತ್ತೋಲೆಗಳಲ್ಲಿ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಮುಖ್ಯವಾಗಿ ದಿನಾಂಕ:06.04.2020ರಂದು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ನಿರ್ದೇಶನಾಲಯದಿಂದ ಎನ್‌ಫೋಲ್ಡ್ ಪ್ರೋ ಆಕ್ಟೀವ್ ಹೆಲ್ತ್ ಟ್ರಸ್ಟ್ ಇವರು ರೂಪಿಸಿ ಯುನಿಸೆಫ್‌ಗೆ ನೀಡಿರುವ Guidelines for Child Care Institution Under the Juvenile Justice Care and Protection Of Children Act 2015 in the context of COVID-19 ಮಾರ್ಗದರ್ಶನಗಳನ್ನು ಹೊರಡಿಸಲಾಗಿರುತ್ತದೆ. ಸದರಿ ಮಾರ್ಗದರ್ಶನಗಳಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಹೊರಗಡೆಯಿಂದ ಬಂದುಹೋಗುವ ಸಿಬ್ಬಂದಿಗಳನ್ನು ಹೇಗೆ ನಿಯಂತ್ರಿಸಬಹುದು, ಆದಷ್ಟು ಮಟ್ಟಿಗೆ ಅವಶ್ಯಕ ಸಿಬ್ಬಂದಿಯನ್ನು ಸಂಸ್ಥೆಯ ಒಳಗೇ ಹೇಗೆ ಉಳಿಸಿಕೊಳ್ಳಬಹುದು, ಇದರಿಂದ ಹೊರಗಡೆಯಿಂದ ಸಿಬ್ಬಂದಿ ಬಂದು ಹೋಗುವುದನ್ನು ಹೇಗೆ ತಪ್ಪಿಸಬಹುದು, ಮಕ್ಕಳನ್ನು ಕೋವಿಡ್ ಸಂಪರ್ಕದಿಂದ ಹೇಗೆ ರಕ್ಷಿಸುವುದು ಎಂಬುದರ ಕುರಿತು ಆಚರಣಾತ್ಮಕ ವಿವರಗಳನ್ನು ಈ ಮಾರ್ಗದರ್ಶನಗಳಲ್ಲಿ ಸಮಗ್ರವಾಗಿ ವಿವರಿಸಲಾಗಿದೆ.

"Interaction of the staff of the CCIs with the children should be regulated especially of those staff which come from outside" ಎಂದು ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ:15.07.2020ರ ಉಲ್ಲೇಖಿತ ಆದೇಶದಲ್ಲಿ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಈಗಾಗಲೇ ಹಲವಾರು ಬಾರಿ ಈ ವಿಷಯದ ಕುರಿತು ನಿರ್ದೇಶನಾಲಯದಿಂದ ಹೇಳಿದ್ದಾಗ್ಯೂ ಪ್ರಸ್ತುತ ದಿನಾಂಕ:15.07.2020ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ನಿರ್ದೇಶನದ ಹಿನ್ನೆಲೆಯಲ್ಲಿ ಸದರಿ ಎನ್‌ಫೋಲ್ಡ್ ಪ್ರೋ ಆಕ್ಟೀವ್ ಹೆಲ್ತ್ ಟ್ರಸ್ಟ್ ಇವರು ರೂಪಿಸಿರುವ ಮಾರ್ಗದರ್ಶನಗಳನ್ನು ಮತ್ತೊಮ್ಮೆ ನೆನಪಿಸಲಾಗುತ್ತಿದೆ(ಪ್ರತಿ ಲಗತ್ತಿಸಿದೆ). ಈ ವಿಷಯದ ಬಗ್ಗೆ ಸದರಿ ಮಾರ್ಗದರ್ಶನಗಳಲ್ಲಿ ಹೊರಗಿನಿಂದ ಬಂದುಹೋಗುವ ಸಿಬ್ಬಂದಿಗಳನ್ನು ಯಾವ ರೀತಿ ನಿಯಂತ್ರಿಸಬಹುದೆಂದು ಹೇಳಲಾಗಿದೆಯೋ ಅದನ್ನು ಈಗಾಗಲೇ ಆರೋಗ್ಯ ಇಲಾಖೆಯ ಕೋವಿಡ್ ಟಾಸ್ಕ್‌ಫೋರ್ಸ್ ಇವರು ಕೇವಲ ಮಕ್ಕಳ ಪಾಲನಾ ಸಂಸ್ಥೆಗಳಿಗೇ ಪ್ರತ್ಯೇಕವಾಗಿ ರೂಪಿಸಿರುವ Advisory for Child Care Institutions in the context of COVID-19 ಪ್ರಕಾರ ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳನ್ನು ಅಚ್ಚುಕಟ್ಟಾಗಿ ಅನುಪಾಲಿಸಲು ಒಟ್ಟಾರೆ ಹೊರಗಡೆಯಿಂದ ಬಂದುಹೋಗುವ ಸಿಬ್ಬಂದಿಯನ್ನು ನಿಯಂತ್ರಿಸುವ ಮೂಲಕ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಕೋವಿಡ್ ಹರಡದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳು ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯೊಂದಿಗೆ **common spots and places** ಗಳಿಂದ ಸಂಪರ್ಕವನ್ನು ಹೊಂದುವ ಸಂದರ್ಭಗಳಿರುತ್ತವೆ. ಆದ್ದರಿಂದ ಮಾಸ್ಕ್ ಧರಿಸಿದ್ದಾಗ್ಯೂ ಸಾಮಾಜಿಕ ಅಂತರವನ್ನು ಕಾಪಾಡಿಕೊಂಡಿದ್ದಾಗ್ಯೂ ಸಿಬ್ಬಂದಿಗಳಿಂದ ಮಕ್ಕಳಿಗೆ ಕೋವಿಡ್ ಸಾಂಕ್ರಾಮಿಕ ರೋಗ ಹರಡುವ ಅವಕಾಶಗಳು ಇರಬಹುದು. ಅಲ್ಲದೇ ವಿಶೇಷ ದತ್ತು ಸಂಸ್ಥೆಗಳಲ್ಲಿ 0–6 ವಯಸ್ಸಿನ ಮಕ್ಕಳಿಗೆ ಆಯಾರವರೇ ಎಲ್ಲಾ ಸೇವೆಗಳನ್ನು ಮಾಡಬೇಕಾಗಿರುವುದರಿಂದ ಇವರಲ್ಲಿ ಸಾಮಾಜಿಕ ಅಂತರ ಕಾಪಾಡುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಮೇಲೆ ತಿಳಿಸಿದಂತೆ ಆದಷ್ಟು ಮಟ್ಟಿಗೆ ಹೊರಗಿನಿಂದ ಬಂದುಹೋಗುವ ಸಿಬ್ಬಂದಿಗಳನ್ನು ನಿಯಂತ್ರಿಸಿದ್ದಾಗ್ಯೂ ಅನಿವಾರ್ಯ ಪರಿಸ್ಥಿತಿಗಳಲ್ಲಿ ಒಂದು ವೇಳೆ ಹೊರಗಿನಿಂದ ಬಂದುಹೋಗುವ ಸಿಬ್ಬಂದಿಗಳನ್ನು ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಅನುಮತಿಸಬೇಕಾದಲ್ಲಿ ಸದರಿ ಸಿಬ್ಬಂದಿಗಳ ಕುಟುಂಬ ಸದಸ್ಯರುಗಳ ವೃತ್ತಿ ಜೀವನ ಮತ್ತು ಅವರ ಟ್ರಾವೆಲ್ ಹಿಸ್ಟರಿ ಬಗ್ಗೆ ಹಾಗೂ ಮಕ್ಕಳ ಪಾಲನಾ ಸಂಸ್ಥೆಯ ಬಂದುಹೋಗುವ ಸಿಬ್ಬಂದಿಗಳ ಟ್ರಾವೆಲ್ ಹಿಸ್ಟರಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ಸಿಬ್ಬಂದಿವಾರು ಮಾಹಿತಿಯನ್ನು ಒಂದು ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು. ಹಾಗೂ ಆ ಮಾಹಿತಿಯಂತೆ ಸದರಿ ಸಿಬ್ಬಂದಿಯನ್ನು ಕೋವಿಡ್ ಪ್ರೋಟೋಕಾಲ್ ಪ್ರಕಾರ ಮಕ್ಕಳ ಪಾಲನಾ ಸಂಸ್ಥೆಗಳ ಒಳಗೆ ಕರ್ತವ್ಯ ನಿರ್ವಹಿಸಲು ಅನುಮತಿಸುವುದು ಸೂಕ್ತವೇ ಎಂಬುದರ ಬಗ್ಗೆ ಕ್ಷೇತ್ರ ಮಟ್ಟದಲ್ಲಿ ಕೋವಿಡ್ ಮಾಹಿತಿ ಇರುವ ವೈದ್ಯಾಧಿಕಾರಿಗಳೊಂದಿಗೆ ಸಂಪರ್ಕಿಸಿ ಆಯಾಯ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ನಿರ್ಧಾರವನ್ನು ಕೈಗೊಳ್ಳತಕ್ಕದ್ದು. ಈ ಬಗ್ಗೆ ಸರ್ಕಾರ ಹಾಗೂ ಸರ್ಕಾರದ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಈ ರೀತಿ ಹೊರಗಿನಿಂದ ಬಂದುಹೋಗುವ ಪ್ರತಿಯೊಬ್ಬ ಸಿಬ್ಬಂದಿಗಳ ಕೂಲಂಕುಷ ವಿಚಾರಣೆಯನ್ನು ನಡೆಸಿ ತದನಂತರದಲ್ಲಿ ಮಾತ್ರ ಅವರನ್ನು ಸಂಸ್ಥೆಗಳ ಒಳಗೆ ಪ್ರವೇಶಿಸಲು ಅನುಮತಿ ನೀಡುವ ಬಗ್ಗೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಖಚಿತಪಡಿಸಿಕೊಳ್ಳತಕ್ಕದ್ದು. ಈ ವಿಚಾರದಲ್ಲಿ ಸರ್ಕಾರ ಹಾಗೂ ಸರ್ಕಾರಿ ಅನುದಾನಿತ ಮಕ್ಕಳ ಪಾಲನಾ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಜವಾಬ್ದಾರಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳದ್ದಾಗಿರುತ್ತದೆ. ಹಾಗೆಯೇ ಖಾಸಗಿ ಮಕ್ಕಳ ಪಾಲನಾ ಸಂಸ್ಥೆಗಳ ವಿಷಯಗಳಲ್ಲಿ ಈ ವಿಚಾರದ ಬಗ್ಗೆ ಸಂಪೂರ್ಣ ಜವಾಬ್ದಾರಿ ಸದರಿ ಸಂಸ್ಥೆಯ ಮುಖ್ಯಸ್ಥರದ್ದಾಗಿರುತ್ತದೆ. ಈ ವಿಚಾರದಲ್ಲಿ ಯಾವುದೇ ಕರ್ತವ್ಯಲೋಪವನ್ನು ಅತೀ ಗಂಭೀರವಾಗಿ ಪರಿಗಣಿಸಲಾಗುವುದು.

ತಮ್ಮ ವಿಶ್ವಾಸಿ,

27.07.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.